ಗುಜರಾತ್‌ನ ಆನಂದ್‌ನಲ್ಲಿ ಸಾವಿರಾರು ಮಕ್ಕಳನ್ನು ಹೆರಲು ಬಾಡಿಗೆ ತಾಯಂದಿರಿಗೆ ನೆರವು ನೀಡಿರುವ ಐವಿಎಫ್ ತಜ್ಞೆ ಡಾ.ನಯನಾ ಪಟೇಲ್.

ಆದರೆ ಮಸೂದೆಗೆ ಒಪ್ಪಿಗೆ ಸಿಕ್ಕ ನಂತರ ಆ ಸಚಿವರ ತಂಡದ ಮುಖ್ಯಸ್ಥೆ ಕೇಂದ್ರ ಸಚಿವೆ ಸುಷ್ಮಾ ಸ್ವರಾಜ್ ಹೇಳಿದ್ದು 'ಭಾರತದಲ್ಲಿ ಸಂಬಂಧಿಕರಿಂದ, ಕುಟುಂಬದ ಇತರ ಸದಸ್ಯರಿಂದ ದತ್ತು ಪಡೆಯುವ ಸಂಪ್ರದಾಯವಿದೆ. ಇದು ಆ ಸಂಪ್ರದಾಯದ ಮುಂದುವರಿದ ಭಾಗವಷ್ಟೆ'.

ಇನ್ನೊಂದು ಮುಖ್ಯವಾದ ಅಂಶವೆಂದರೆ ವಿದೇಶಿ ದಂಪತಿಗಳಿಗೆ ಬಾಡಿಗೆ ತಾಯಿಯ ಮೂಲಕ ಭಾರತದಲ್ಲಿ ಮಗು ಪಡೆಯಲು ಅವಕಾಶವಿಲ್ಲ ಎಂಬುದು. ಕಳೆದ 7–8 ವರ್ಷಗಳಲ್ಲಿ ಈ ಉದ್ಯಮ ಎಷ್ಟು ಬೆಳೆದಿತ್ತೆಂದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ದಂಪತಿಗೆ ಬಾಡಿಗೆ ಗರ್ಭವೆಂದರೆ ಭಾರತ, ನೇಪಾಳ, ಥಾಯ್ಲೆಂಡ್, ಮೆಕ್ಸಿಕೊ ಮೊದಲಾದ ದೇಶಗಳ ಮಹಿಳೆಯರ ಗರ್ಭಗಳು ಎಂಬಂತಾಗಿತ್ತು. (ಥಾಯ್ಲೆಂಡ್‌ನಲ್ಲಿ ಬಾಡಿಗೆ ತಾಯಿ ಮೂಲಕ ಅವಳಿ ಮಕ್ಕಳನ್ನು ಪಡೆದ ಆಸ್ಟ್ರೇಲಿಯ ದಂಪತಿ ಬುದ್ಧಿಮಾಂದ್ಯ ಮಗುವನ್ನು ಬಿಟ್ಟು, ಆರೋಗ್ಯಕರ ಮಗುವನ್ನು ಒಯ್ದ ನಂತರ ಆ ದೇಶ ಕೂಡಾ ಈಚೆಗೆ ವಾಣಿಜ್ಯ ಉದ್ದೇಶದ ಬಾಡಿಗೆ ತಾಯ್ತನ ನಿಷೇಧಿಸಿದೆ). ಹೆಚ್ಚಿನ ಪ್ರಕರಣಗಳಲ್ಲಿ ಬಾಡಿಗೆ ತಾಯಂದಿರ ಶೋಷಣೆ ಮಾಡಿದ್ದು ವಿದೇಶೀಯರೇ ಎಂಬುದು ಆತಂಕಕಾರಿ ಬೆಳವಣಿಗೆ. ಕಾನೂನಿನ ಹಿಡಿತವಿಲ್ಲದ್ದರಿಂದ ಸುಲಭವಾಗಿ ತಪ್ಪಿಸಿಕೊಂಡು ಹೋಗುವವರು ಅವರು, ಇಲ್ಲಿ ಬಲಿಪಶುವಾಗುವವರು ಬಡ ಹೆಣ್ಣುಮಕ್ಕಳು.

ಬಾಡಿಗೆ ತಾಯ್ತನವನ್ನು ಸಂಪೂರ್ಣವಾಗಿ ನಿಷೇಧಿಸುವ ಬದಲು ಕೆಲವು ಸುಧಾರಣೆಗಳನ್ನು ಮಾಡಬಹುದಿತ್ತು ಎಂಬುದು ಬೆಂಗಳೂರಿನಲ್ಲಿ ಶೋಷಿತ ಹೆಣ್ಣುಮಕ್ಕಳಿಗೆ ಕಾನೂನು ನೆರವು ನೀಡುತ್ತಿರುವ ಹಿರಿಯ ವಕೀಲ ವೈ.ಸಿ.ನಾಗಭೂಷಣ ಅವರ ನಿಲುವು. ಈ ನಿಷೇಧದಿಂದ ಈ ಉದ್ಯಮ ಕಳ್ಳತನದಿಂದ ನಡೆಯುವ ವಹಿವಾಟುಯಾಗಿ ರೂಪುಗೊಳ್ಳುವ ಅಪಾಯವಿದೆ ಅಥವಾ ಬೇರೆ ದೇಶಗಳಿಗೆ ಸ್ಥಳಾಂತರಗೊಳ್ಳಬಹುದು ಎಂಬುದು ಅವರ ಆತಂಕ.

ಈ ಆತಂಕಕ್ಕೆ ಕಾರಣಗಳೂ ಇವೆ. ಯುಪಿಎ ಸರ್ಕಾರ ದೇಶದಲ್ಲಿ ಸಲಿಂಗಿಗಳು ಈ ಬಾಡಿಗೆ ತಾಯಂದಿರ ಮೂಲಕ ಮಕ್ಕಳು ಪಡೆಯುವುದರ ಮೇಲೆ ನಿಷೇಧ ವಿಧಿಸಿತು. ಆಗ ದೇಶದ ಕೆಲವು ಹೆಣ್ಣುಮಕ್ಕಳು ವಿದೇಶಿ ಸಲಿಂಗಿ

**ವಿದೇಶಿ ದಂಪತಿಗಳಿಗೆ ಬಾಡಿಗೆ ತಾಯಿಯ ಮೂಲಕ ಭಾರತದಲ್ಲಿ ಮಗು ಪಡೆಯಲು ಅವಕಾಶವಿಲ್ಲ ಎಂಬುದು ಮಸೂದೆಯ ಪ್ರಮುಖ ಅಂಶ.**

## ಸೆಲೆಬ್ರಿಟಿಗಳ 'ಬಾಡಿಗೆ ಸಂಸಾರ'

ಸ್ವಂತ ಮಕ್ಕಳಿದ್ದರೂ ಬಾಡಿಗೆ ತಾಯಿಯ ಮೂಲಕ ಮಕ್ಕಳನ್ನು ಪಡೆಯುವುದು ಸೆಲೆಬ್ರಿಟಿಗಳಲ್ಲಿ ಫ್ಯಾಷನ್ ಎಂಬಂತಾಗಿದೆ. ಬಾಲಿವುಡ್ ನಟ ಶಾರುಕ್ ಖಾನ್– ಗೌರಿ ದಂಪತಿಗೆ ಒಬ್ಬ ಮಗ ಮತ್ತು ಮಗಳಿದ್ದರೂ ಬಾಡಿಗೆ ತಾಯಿಯ ಮೂಲಕ ಅಬ್ರಾಮ್ ಎಂಬ ಮಗನನ್ನು ಪಡೆದಿದ್ದಾರೆ.

ಇನ್ನೊಬ್ಬ ನಟ ಅಮೀರ್ ಖಾನ್‌ಗೆ ತಮ್ಮ ಮೊದಲ ಪತ್ನಿ ರೀನಾ ದತ್ತಾ ಅವರಿಂದ ಮಗ ಹಾಗೂ ಮಗಳಿದ್ದಾರೆ. ಎರಡನೇ ಪತ್ನಿ ಕಿರಣ್ ರಾವ್‌ಗೆ ಗರ್ಭಪಾತವಾದ ನಂತರ ದಂಪತಿ ಬಾಡಿಗೆ ತಾಯಿಯ ಮೂಲಕ ಆಜಾದ್ ರಾವ್ ಖಾನ್ ಎಂಬ ಪುತ್ರನನ್ನು ಪಡೆದಿದ್ದಾರೆ.

ಸಲ್ಮಾನ್ ಖಾನ್ ಸಹೋದರ ಸೋಹೈಲ್ ಖಾನ್ ಮತ್ತು ಪತ್ನಿ ಸೀಮಾಗೆ ಒಬ್ಬ ಪುತ್ರನಿದ್ದು, ನಂತರ ಬಾಡಿಗೆ ತಾಯಿಯ ಮೂಲಕ ಯೋಹಾನ್ ಎಂಬ ಮಗನನ್ನು ಪಡೆದಿದ್ದಾರೆ.

ನಟ ತುಷಾರ್ ಕಪೂರ್ ಅವಿವಾಹಿತರಾಗಿದ್ದು, ಬಾಡಿಗೆ ತಾಯಿಯ ಮೂಲಕ 3–4 ತಿಂಗಳ ಹಿಂದೆ ಲಕ್ಷ್ಯಾ ಎಂಬ ಮಗನನ್ನು ಪಡೆಯುವ ಮೂಲಕ ಈ ವ್ಯವಸ್ಥೆಯಿಂದ ಮಗು ಪಡೆದ ಸಿಂಗಲ್ ಪೇರೆಂಟ್ ಆಗಿದ್ದಾರೆ.

ಖ್ಯಾತ ಹಾಲಿವುಡ್ ನಟಿ ನಿಕೋಲ್ ಕಿಡ್ಮನ್, ಸೂಪರ್ ಮಾಡೆಲ್ ಟೈರಾ ಬ್ಯಾಂಕ್ಸ್, ಟಿವಿ ಧಾರಾವಾಹಿ 'ಫ್ರೆಂಡ್ಸ್' ನಟಿ ಸಾರಾ ಜೆಸ್ಸಿಕಾ ಪಾರ್ಕರ್, ಖ್ಯಾತ ಸಂಗೀತಗಾರ, ಸಲಿಂಗಿ ಎಲ್ಟನ್ ಜಾನ್, ಬಯೋನ್ಸ್ ನೋವೆಲ್ಸ್ ಬಾಡಿಗೆ ತಾಯಿಯ ಮೂಲಕ ಮಕ್ಕಳನ್ನು ಪಡೆದ ಅಂತರರಾಷ್ಟ್ರೀಯ ಸೆಲೆಬ್ರಿಟಿಗಳು.

